# ಶ್ರೀಕಪಿಲದೇವರ ಸ್ತೋತ್ರ ಸುಳಾದಿ

ರಾಗ–ರೇವತಿ ಧ್ರುವತಾಳ

ಸಿದ್ಧಿದಾಯಕ ಶಿಷ್ಯಜನ ಪರಿಪಾಲ ಪರಮಾ ।
ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ ।
ನಿದ್ರಾರಹಿತ ನಿದ್ರಾರಮಣ ನಿರ್ವಿಕಾರ ।
ಚಿದ್ದೇಹ ಸರ್ವಕಾಲ ಸುಂದರಸಾರ ।
ಪದ್ಮಸಂಭವ ಬಲಿ ಪ್ರಕ್ಷಾಲಿತ ಪಾದ ಮಹಾ ।
ಹೃದ್ರೋಗನಾಶ ವೈಕುಂಠವಾಸ ।
ವಿದ್ಯಾತೀತ ವಿಶ್ವನಾಟಕ ನಾರಾಯಣ ।
ವಿದ್ಯ ಉದ್ಧಾರಕ ಉದಧಿ ಸದನಾ ।
ಸಿದ್ಧಾದಿ ವಿನುತ ಸಂತತ ಪಾತಾಳವಾಸಿ ।
ಬುದ್ಧಿ ವಿಶಾಲ ಮಹಿಮ ಪಾಪಹಾರಿ ।
ಖದ್ಯೋತವರ್ಣ ಸಕಲ ವ್ಯಾಪ್ತ ಆಕಾಶ ಅಮಿತ ।
ಬದ್ಧ ವಿಚ್ಛೇದ ನಾನಾ ರೂಪಾತ್ಮಕಾ ।
ಅದ್ವೈತಕಾಯಾ ಮಾಯಾರಮಣ ರಾಜೀವ ನೇತ್ರಾ ।
ಅದ್ವಯ ಅನಾದಿ ಪುರುಷ ಚಿತ್ರ ।
ಕರ್ದಮ ಮುನಿಸೂನು ವಿಜಯ ವಿಠ್ಠಲ ಕಪಿಲ ।
ನಿರ್ದೋಷಕರುಣಾಬ್ಧಿ ಸರ್ವರಾಧಾರಿ ॥೧॥

–ಮಟ್ಟತಾಳ–

ಆದಿಮನ್ವಂತರದಿ ಜನಿಸಿದ ಮಹದ್ದೈವ ।
ಆದಿಪೊರಬೊಮ್ಮ ಬೊಮ್ಮ ನಯ್ಯ ಜೀಯಾ ।
ಸಾಧು ಜನರ ಪ್ರಿಯಾ ಸಂತತ ಮುನಿತಿಲಕಾ ।
ಬೋಧ ಶರೀರ ಭಕುತರ ಮನೋಹರ ಹರಿ ।
ಮಾಧವ ಸಿರಿ ವಿಜಯ ವಿಠ್ಠಲ ವಿಮಲೇಶಾ ।
ಮೋದ ಮತಿಯ ಕೊಡುವ ಕಪಿಲ ಭಗವನ್ಮೂರ್ತಿ ॥೨॥

-ತ್ರಿವಿಡಿತಾಳ-

ಘನಮಹಿಮ ಗೌಣಾಂಡದೊಳಗೆ ಲೀಲೆಯಿಂದ ।
ಜನಿಸಿ ಮೆರೆದೆ ಬಿಂದು ಸರೋವರದಲ್ಲಿ ।
ಮಿನುಗುವ ದ್ವಯ ಹಸ್ತ ಅಪ್ರಾಕೃತ ಕಾಯ ।
ಇನನಂತೆ ಒಪ್ಪುವ ಶಿರೊರುಹವೋ ।
ಕನಕ ಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ ।
ಅನವರತ ತುಂಬಿ ಸೂಸುತಲಿದಕೋ ।
ಜನನಿ ದೇವಹೊತಿಗೆ ಉಪದೇಶವನ್ನು ಮಾಡಿ ।
ಗುಣ ಮೊದಲಾದ ತತ್ವವ ತಿಳಿಸಿದೆ ।
ತನುವಿನೊಳಗೆ ನೀನೆ ತಿಳಿದು ತಿಳಿದೆ ನಿತ್ಯ ।
ಜನರನ್ನು ಪಾಲಿಸುವ ಕಪಿಲಾಖ್ಯನೆ ।
ಅನುದಿನ ನಿನ್ನ ಧ್ಯಾನವ ಮಾಡಿ ಮಣಿಯಿಂದ ।
ಎಣಿಸುವ ಸುಜನಕ್ಕೆ ಜ್ಞಾನ ಕೊಡುವೆ ।
ಎಣೆಗಾಣೆ ನಿನ್ನ ಲೋಚನದ ಶಕ್ತಿಗೆ ಸಗರ ।
ಜನಪ ನಂದನರನ್ನು ಭಂಗಿಸಿದೆ ।
ಅನುಮಾನವಿದಕಿಲ್ಲ ನಿನ್ನ ನಂಬಿದ ಮೂಢ ।
ಮನುಜನಿಗೆ ಮಹಪದವಿ ಬರುವದಯ್ಯ ।
ಮುನಿಕೊಲೋತ್ತಮ ಕಪಿಲ ವಿಜಯ ವಿಠ್ಠಲರೇಯ ।
ಎನಗೆ ಯೋಗ ಮಾರ್ಗವನು ತೋರೊ ತವಕದಿಂದ ॥೩॥

-ಅಟ್ಟತಾಳ-

ಕಪಿಲ ಕಪಿಲಯೆಂದು ಪ್ರತಃಕಾಲದಲೆದ್ದು ।
ಸಪುತ ಸಾರಿಗೆಯಲಿ ನುಡಿದ ಮಾನವನಿಗೆ ।
ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲಾ ।
ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ ।
ಗುಪುತ ನಾಮವಿದು ಮನದೊಳಗಿಡುವುದು ।
ಕಪಟ ಜೀವರು ಈತನು ಒಬ್ಬ ಋಷಿಯೆಂದು ।
ತಪಿಸುವರು ಕಾಣೋ ನಿತ್ಯ ನರಕದಲ್ಲಿ ।

ಕೃಪಣ ವತ್ಸಲ ನಮ್ಮ ವಿಜಯ ವಿಠ್ಠಲರೇಯ ।
ಕಪಿಲಾವತಾರ ಬಲ್ಲವಗೆ ಬಲು ಸುಲಭ ॥೪॥

–ಆದಿತಾಳ–

ಬಲ ಹಸ್ತದಲ್ಲಿ ಯಜ್ಞಶಾಲಿಯಲ್ಲಿ ಕಂ ।
ಗಳ ಕಪ್ಪಿನಲ್ಲಿ ಹೃದಯ ಸ್ಥಾನ ನಾಭಿಯಲ್ಲಿ ।
ಜಲಧಿ ಗಂಗಾ ಸಂಗಮದಲ್ಲಿ ಗಮನದಲ್ಲಿ ।
ತುಲಸಿ ಪತ್ರದಲ್ಲಿ ತುರಗ ತುರುವಿನಲ್ಲಿ ।
ಮಲುಗುವ ಮನೆಯಲ್ಲಿ ನೈವೇದ್ಯ ಸಮಯದಲ್ಲಿ ।
ಬಲು ಕರ್ಮ ಬಂಧಗಳು ಮೋಚಕವಾಗುವಲ್ಲಿ ।
ಚಲುವನಾದವನಲ್ಲಿ ವಿದ್ಯ ಪೇಳುವನಲ್ಲಿ ।
ಫಲದಲ್ಲಿ ಪ್ರತಿಕೊಲವಿಲ್ಲದ ಸ್ಥಳದಲ್ಲಿ ।
ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರಿವ ।
ಜಲದಲ್ಲಿ ಜಾಂಬುದ ನದಿಯಲ್ಲಿ ಶ್ಲೋಕದಲ್ಲಿ ।
ಬಲಿಮುಖ ಬಳಗದಲ್ಲಿ ಆಚಾರಶೀಲನಲ್ಲಿ ।
ಘಳಿಗೆ ಆರಂಭದಲ್ಲಿ ಪಶ್ಚಿಮ ಭಾಗದಲ್ಲಿ ।
ಪೊಳೆವ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು ।
ಕಾಲ ಕಾಲಕ್ಕೆ ಬಿಡದೆ ಸ್ಮರಿಸು ಕಪಿಲ ಪರಮಾತ್ಮನ್ನ ।
ಗೆಲವುಂಟು ನಿನಗೆಲವೊ ಸಂಸಾರದಿಂದ ವೇಗ ।
ಕಲಿಯುಗದೊಳಗಿದೆ ಕೊಂಡಾಡಿದವರಿಗೆ ।
ಖಳರ ಅಂಜಿಕೆಯಿಲ್ಲ ನಿಂದಲ್ಲಿ ಶುಭಯೋಗ ।
ಬಲವೈರಿನುತ ನಮ್ಮ ವಿಜಯ ವಿಠ್ಠಲರೇಯಾ ।
ಇಳೆಯೊಳಗೆ ಕಪಿಲಾವತಾರನಾಗಿ ನಮ್ಮ ಭಾರವಹಿಸಿದ ॥೫॥

–ಜತೆ–

ತಮ ಪರಿಚ್ಛೇದ ಈತನ ಸ್ಮರಣೆ ನೋಡು ಹೃ– ।
ತ್ಕಮಲದೊಳಗೆ ವಿಜಯ ವಿಠ್ಠಲನ್ನ ಚರಣಾಬ್ಜಾ ॥೬॥